ಆದಷ್ಟು ಬೇಗ ತುರ್ತಾಗಿ ಈ ವರ್ಷದಲ್ಲಿ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ಈವರೆಗೆ ಸುಮಾರು ಮೂರು ಕೋಟಿ ತೊಂಭತ್ತಾರು ಲಕ್ಷ ರೂಪಾಯಿ ಹಣವನ್ನು ಫ್ಲಡ್ ಡ್ಯಾಮೇಜ್ ಸಲುವಾಗಿ ಸರ್ಕಾರ ಬಿಡುಗಡೆ ಮಾಡಿದೆ. ಆದರೆ ಸಾಲಿಯಾನರವರು ನಮ್ಮಲ್ಲಿ ಜಾಸ್ತಿ ಹಾನಿಯಾಗಿದೆ, ಉತ್ತರ ಸರಿಯಿಲ್ಲ ಎಂದು ಹೇಳಿದ್ದಾರೆ. ಬೇಕಾದರೆ ಇನ್ನೊಂದು ಸಲ ನಾನು ಡೆಪ್ಯುಟಿ ಕಮಿಷನರ್‌ರವರಿಂದ ದಕ್ಷಿಣ ಕನ್ನಡದ ವರದಿಯನ್ನು ತಿರಿಸಿಕೊಂಡು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಆದರೆ ಪರಿಹಾರ ಕೊಡುವುದು ಒಂದು ಹೆಕ್ಟೇರ್‌ಗೆ 500 ರೂಪಾಯಿ, ಇದು ಬಹಳ ಕಡಿಮೆಯಾಗುತ್ತದೆಂದು ಹೇಳಿದ್ದಾರೆ ಇದು ಕೇಂದ್ರ ಸರ್ಕಾರದ ಕಾನೂನಿನ ವ್ಯಾಪ್ತಿಯಲ್ಲಿ ಬರುವುದರಿಂದ ಈಗಾಗಲೇ ಒಂದು ಪತ್ರವನ್ನು ಕೂಡ ನಾನು ಬರೆದಿದ್ದೇನೆ. ಇದು ಬಹಳ ಕಡಿಮೆಯಾಗುತ್ತದೆ. ಈ ನ್ಯಾಚುರಲ್ ಕೆಲಾಮಿಟೀಸ್‌ನಲ್ಲಿ ತೊಂದರೆಯಾದ ರೈತರಿಗೆ ಹೆಚ್ಚಿಗೆ ಹಣ ಕೊಡಬೇಕು ಎಂದು ಹೇಳಿ ನಾವು ಸರ್ಕಾರದವರು ಹಿಂದೆ ಪತ್ರವನ್ನು ಬರೆದಿದ್ದೇವೆ. ಇನ್ನೂ ಒಂದು ಸಲ ಬೇಕಾದರೆ ನಾನು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆಯುತ್ತೇನೆ ಎಂದು ನಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಇಲ್ಲಿ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ನೀಡಲಾದ ಉತ್ತರಗಳು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :- ಮಾನ್ಯ ಅಧ್ಯಕ್ಷರೇ, ಈ ದಿನದ ಲಿಖಿತ ಮೂಲಕ ಉತ್ತರಿಸುವ 20 ನೇ ಪ್ರಶ್ನೆಗಳ ಪಟ್ಟಿಯಲ್ಲಿರುವ ಒಟ್ಟು 68 ಪ್ರಶ್ನೆಗಳ ಪೈಕಿ 40 ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯೆ

1593 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಡತನದಲ್ಲಿರುವ ಗರ್ಭಿಣಿ ಸ್ತ್ರೀಯರಿಗೆ ಸರ್ಕಾರದಿಂದ ಹೆರಿಗೆ ಭತ್ಯೆ ನೀಡುವ ಯೋಜನೆಯು ರದ್ದಾಗಿದೆಯೆ?

ಆ) ಈ ಯೋಜನೆ ಜಾರಿಯಲ್ಲಿದ್ದರೆ ಶಿವಮೊಗ್ಗ ಜಿಲ್ಲೆಯ ವಿವಿಧ ತಾಲ್ಲೂಕುಗಳ ಫಲಾನುಭಾವಿಗಳಿಗೆ ಎಷ್ಟು ಸಮಯದಿಂದ ಹಣ ಪಾವತಿಸಿರುವುದಿಲ್ಲ.

ಇ) ಹೆರಿಗೆ ಭತ್ಯೆಗಾಗಿ ಈ ತಾಲ್ಲೂಕುಗಳಲ್ಲಿ ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಉ) ಹೆರಿಗೆ ಮುನ್ನ ಪಾವತಿಸಬೇಕಾಗಿದ್ದ ಈ ಹೆರಿಗೆ ಬತ್ಯೆ ಹೆರಿಗೆ ಆದರೂ ಇನ್ನು ಹೆರಿಗೆ ಭತ್ಯೆ ಬರುವುದೆಂಬ ನಿರೀಕ್ಷೆಯಲ್ಲಿರುವ ಈ ನತದೃಷ್ಟ ಹೆಣ್ಣು ಮಕ್ಕಳಿಗೆ ಈ ಹಣ ಯಾವಾಗ ದೊರೆಯುವುದು?

ಶ್ರೀಮತಿ ವಿಮಲಾಬಾಯಿ ಜಗದೇವ್‌ರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ) ಭಾರತ ಸರ್ಕಾರವು ರಾಷ್ಟ್ರೀಯ ಸಾಮಾಜಿಕ ನೆರವು ಎಂಬ ಹೊಸ ಯೋಜನೆ ಅಡಿಯಲ್ಲಿ ರಾಷ್ಟ್ರೀಯ ಹೆರಿಗೆ ಭತ್ಯೆ ಯೋಜನೆಯನ್ನು 1996-97ನೇ ಸಾಲಿನಿಂದ ಅನುಷ್ಠಾನಗೊಳಿಸಿದ್ದು ಇದು ಹಾಲಿ ಜಾರಿಯಲ್ಲಿದೆ. ಆದುದರಿಂದ ರಾಜ್ಯ ಸರ್ಕಾರದಿಂದ ಅನುಷ್ಠಾನಗೊಳ್ಳುತ್ತಿದ್ದ ಹೆರಿಗೆ ಭತ್ಯೆ ಯೋಜನೆಯನ್ನು 1996ನೇ ಸಾಲಿನಿಂದ ಕೈಬಿಡಲಾಗಿದೆ.

ಆ) 1996-97ನೇ ಸಾಲಿನಿಂದ.

ಇ) 38,368.

ಈ) ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಿದ ತಕ್ಷಣ ನೀಡಲಾಗುವುದು.

ಬಳ್ಳಾರಿಯ ಭೂಮಾಪನ ಇಲಾಖೆಯ ಸಿಬ್ಬಂದಿಗಳಿಂದ ಭೂಮಿ ಕಬಳಿಕೆ.

1594 - ಶ್ರೀ ಅಲ್ಲಂ ವೀರಭದ್ರಪ್ಪ, (ಕುರುಗೋಡು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿಯ ಭೂಮಾಪನ ಇಲಾಖೆಯ ಸಿಬ್ಬಂಧಿ ವರ್ಗದವರಿಂದ ನಡೆದ ಭೂಮಿ ಕಬಳಿಕೆ ಪ್ರಕರಣ ಬೆಳಕಿಗೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಸಂಬಂಧದಲ್ಲಿ ಎಷ್ಟು ಜನರ ಮೇಲೆ ಕ್ರಮ ಕೈಗೊಳ್ಳಲಾಗಿದೆ?

ಇ) ಇದರಿಂದಾಗಿ ಎಷ್ಟು ಎಕರೆ ಭೂಮಿ ಕಬಳಿಕೆಯಾಗಿದೆ?

ಈ) ಸದರಿ ಪ್ರಕರಣವನ್ನು ಸಿ.ಓ.ಡಿ.ವಿಚಾರಣೆಗೆ ವಹಿಸಲಾಗಿದೆಯೇ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು) :

ಅ) ಹೌದು. ಬೆಳಕಿಗೆ ಬಂದಿದೆ.

ಆ) 5 ಜನರ ಮೇಲೆ ಕ್ರಮ ಕೈಗೊಳ್ಳಲಾಗಿದೆ.

ಇ) 04 ಎಕರೆ - 57.5 ಸೆಂಟ್ಸ್

ಈ) ಇಲ್ಲ.